# All India Radio: Bangalore
# National Bulletin In Kannada
# 24.11.2025  19.35 p.m.

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

****************

**ಮುಖ್ಯಾಂಶಗಳು**

1. **ಬಾಲಿವುಡ್ ದಂತಕಥೆ, ಹೀ–ಮ್ಯಾನ್, ಧರ್ಮೇಂದ್ರ ನಿಧನ; ಗಣ್ಯರಿಂದ ಸಂತಾಪ**
2. **ನಾಳೆ ಅಯೋಧ್ಯೆ ರಾಮ ಜನ್ಮಭೂಮಿ ಕ್ಷೇತ್ರದಲ್ಲಿ ಧ್ವಜಾರೋಹಣ; ಪ್ರಧಾನಿ ನರೇಂದ್ರ ಮೋದಿ ಭಾಗಿ**
3. **ದ್ವಿಪಕ್ಷೀಯ ವ್ಯಾಪಾರ ಮತ್ತು ಹೂಡಿಕೆಯನ್ನು ಹೆಚ್ಚಿಸಲು ಮಾತುಕತೆ ತ್ವರಿತಗೊಳಿಸಲಿರುವ ಭಾರತ–ಕೆನಡಾ**
4. **ಟೋಕಿಯೊದಲ್ಲಿ ಇಂದು ನಡೆದ ಡೆಫ್ಲಿಂಪಿಕ್ಸ್ ಶೂಟಿಂಗ್‌ನಲ್ಲಿ ಭಾರತಕ್ಕೆ ಮತ್ತೊಂದು ಚಿನ್ನ**

***************

ಬಾಲಿವುಡ್‌ನ ಹೀ–ಮ್ಯಾನ್ ಎಂದೇ ಪ್ರೀತಿಯಿಂದ ಕರೆಯಲ್ಪಡುವ ಸಿನಿಮಾ ರಂಗದ ದಂತಕಥೆ, ಹಿರಿಯ ನಟ, ಪದ್ಮಭೂಷಣ ಪ್ರಶಸ್ತಿ ಪುರಸ್ಕೃತ ಧರ್ಮೇಂದ್ರ ಅವರು 89ನೇ ವಯಸ್ಸಿನಲ್ಲಿ ಇಂದು ನಿಧನರಾಗಿದ್ದಾರೆ.

ದೀರ್ಘಕಾಲದ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಈ ತಿಂಗಳ ಆರಂಭದಲ್ಲಿ ಬ್ರೀಚ್ ಕ್ಯಾಂಡಿ ಆಸ್ಪತ್ರೆಗೆ ದಾಖಲಾಗಿದ್ದರು. ಮತ್ತು ಅವರ ಆರೋಗ್ಯವು ನಿರಂತರವಾಗಿ ಕ್ಷೀಣಿಸುತ್ತಿತ್ತು. ಅವರ ನಿಧನವು ಭಾರತೀಯ ಚಿತ್ರರಂಗದಲ್ಲಿ ಒಂದು ಯುಗದ ಅಂತ್ಯವನ್ನು ಸೂಚಿಸುತ್ತದೆ, ಶೋಲೆ, ಚುಪ್ಕೆ ಚುಪ್ಕೆ ಮತ್ತು ಫೂಲ್ ಔರ್ ಪತ್ತರ್ ನಂತಹ ಚಿತ್ರಗಳಲ್ಲಿ ಅವರ, ಅಭಿನಯ ಚಲನಚಿತ್ರ ಪ್ರೇಮಿಗಳನ್ನು ಮೋಡಿ ಮಾಡಿತ್ತು. ನಿಜವಾದ ದಂತಕಥೆಯಾಗಿರುವ ಧರ್ಮೇಂದ್ರ ಅವರ ಪರಂಪರೆಯು ಅವರ ಮರೆಯಲಾಗದ ಕೆಲಸ ಮತ್ತು ಲಕ್ಷಾಂತರ ಜನರಿಗೆ ಸ್ಫೂರ್ತಿ. ಅವರ ಕಂಚಿನ ಕಂಠ ರೋಮಾಂಚಕ

**ಧ್ವನಿ: ಧರ್ಮೇಂದ್ರ**

ವೃತ್ತಿಪರ ರಂಗದಲ್ಲಿ, ಧರ್ಮೇಂದ್ರ 1960 ರಲ್ಲಿ ದಿಲ್ ಭಿ ತೇರಾ ಹಮ್ ಭಿ ತೇರೆಯೊಂದಿಗೆ ಪಾದಾರ್ಪಣೆ ಮಾಡಿದರು ಮತ್ತು ಕೊನೆಯದಾಗಿ 2024 ರಲ್ಲಿ ತೇರಿ ಬಾತೋನ್ ಮೇ ಐಸಾ ಉಲ್ಜಾ ಜಿಯಾ ಚಿತ್ರದಲ್ಲಿ ಕಾಣಿಸಿಕೊಂಡರು. ಭಾರತೀಯ ಚಿತ್ರರಂಗದ ಇತಿಹಾಸದಲ್ಲಿ ಶ್ರೇಷ್ಠ, ಅತ್ಯಂತ ಸುಂದರ ಮತ್ತು ವಾಣಿಜ್ಯಿಕವಾಗಿ ಅತ್ಯಂತ ಯಶಸ್ವಿ ಚಲನಚಿತ್ರ ತಾರೆಗಳಲ್ಲಿ ಒಬ್ಬರೆಂದು ಪರಿಗಣಿಸಲ್ಪಟ್ಟ ಧರ್ಮೇಂದ್ರ ಆರು ದಶಕಗಳಿಗೂ ಹೆಚ್ಚು ಕಾಲದ ಸಿನಿಮೀಯ ವೃತ್ತಿಜೀವನವನ್ನು ಹೊಂದಿದ್ದರು.

ಅವರು 300 ಕ್ಕೂ ಹೆಚ್ಚು ಚಿತ್ರಗಳಲ್ಲಿ ಕೆಲಸ ಮಾಡಿದ್ದಾರೆ. ಹಿಂದಿ ಚಿತ್ರರಂಗದಲ್ಲಿ ಅತಿ ಹೆಚ್ಚು ಹಿಟ್ ಚಿತ್ರಗಳಲ್ಲಿ ನಟಿಸಿದ ದಾಖಲೆ ಧರ್ಮೇಂದ್ರ ಅವರ ಹೆಸರಿನಲ್ಲಿದೆ. ಅವರಿಗೆ 2012 ರಲ್ಲಿ ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಧರ್ಮೇಂದ್ರ ಭಾರತೀಯ ಜನತಾ ಪಕ್ಷದಿಂದ ಲೋಕಸಭಾ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. ಅವರು 2004 ರಿಂದ 2009 ರವರೆಗೆ ರಾಜಸ್ಥಾನದ ಬಿಕಾನೇರ್ ಕ್ಷೇತ್ರವನ್ನು ಪ್ರತಿನಿಧಿಸಿದ್ದರು.

ಹಿರಿಯ ನಟ ಮತ್ತು ಪದ್ಮಭೂಷಣ ಪ್ರಶಸ್ತಿ ಪುರಸ್ಕೃತ ಧರ್ಮೇಂದ್ರ ಅವರ ನಿಧನಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ವಾರ್ತಾ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ಸೇರಿದಂತೆ ಹಲವು ಗಣ್ಯರು ಸಂತಾಪ ಸೂಚಿಸಿದ್ದಾರೆ.

***************

ಅಯೋಧ್ಯೆಯಲ್ಲಿ ನಾಳೆ ನಡೆಯಲಿರುವ ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರದ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಭಾಗವಹಿಲಿದ್ದಾರೆ. ಇದೇ ವೇಳೆ ಪ್ರಧಾನಿ ಸಭೆಯನ್ನುದ್ದೇಶಿಸಿ ಮಾತನಾಡಲಿದ್ದಾರೆ.

ಶ್ರೀರಾಮ ಜನ್ಮಭೂಮಿ ದೇವಾಲಯದ ಕಟ್ಟಡ ಕಾಮಗಾರಿಗಳೆಲ್ಲ ಪೂರ್ಣಗೊಂಡ ಹಿನ್ನೆಲೆಯಲ್ಲಿ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈಗಾಗಲೇ ವೇದಾಚಾರ್ಯರುಗಳು ವೇದಘೋಷಗಳೊಂದಿಗೆ ವೈದಿಕ ಪದ್ಧತಿಯಂತೆ ಗಣಪತಿ ಪೂಜೆ, ಪಂಚಾಂಗ ಪೂಜೆ, ಶೋಡೊಷ ಮಾತೃಕಾ ಪೂಜೆ ಮತ್ತು ವಾಸ್ತು ಹಾಗೂ ನವಗ್ರಹ ಪೂಜೆಗಳನ್ನು ಶಾಸ್ತ್ರೋಕ್ತವಾಗಿ ನೆರವೇರಿಸಿದ್ದಾರೆ.

ತಮ್ಮ ಭೇಟಿಯ ವೇಳೆ ಪ್ರಧಾನಿ ಮಾತಾ ಅನ್ನಪೂರ್ಣ ಮಂದಿರಕ್ಕೂ ಭೇಟಿ ನೀಡಲಿದ್ದಾರೆ. ರಾಮ ದರ್ಬಾರ್ ಗರ್ಭಗುಡಿಯಲ್ಲಿ ಪ್ರಧಾನಿ, ದರ್ಶನ ಪಡೆದು ಪೂಜೆ ಸಲ್ಲಿಸಲಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು, ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ನಂತರ ಅಯೋಧ್ಯೆ ನಗರದಲ್ಲಿ ಭವ್ಯ ರೋಡ್‌ಶೋ ನಡೆಸಲಿದ್ದಾರೆ.

***************

ಹೊಸ ನೀತಿಯಡಿಯಲ್ಲಿ, ಪರಿಸರವನ್ನು ಉಳಿಸಲು ಸರ್ಕಾರ ಎಲ್ಲಾ ಉಷ್ಣ ಸ್ಥಾವರಗಳಿಗೆ ಕಡ್ಡಾಯ ಬಯೋಮಾಸ್ ಮತ್ತು ಪುರಸಭೆಯ ಘನತ್ಯಾಜ್ಯ ಬಳಸುವುದನ್ನು ಕಡ್ಡಾಯಗೊಳಿಸಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಹೇಳಿದ್ದಾರೆ.

ಹರಿಯಾಣದ ರೇವಾರಿ ಜಿಲ್ಲೆಯಲ್ಲಿ ಇಂದು ಪ್ಯಾಲೆಟ್ ಸ್ಥಾವರವನ್ನು ಉದ್ಘಾಟಿಸಿ, ಕೆ2 ಬಯೋ ಎಥೆನಾಲ್ ಸ್ಥಾವರಕ್ಕೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ಮೊದಲು, ಬೆಳೆ ತ್ಯಾಜ್ಯವು ರೈತರಿಗೆ ಮತ್ತು ಪರಿಸರಕ್ಕೆ ಹೊರೆಯಾಗಿತ್ತು ಆದರೆ ಈಗ ಅದನ್ನು ಉಷ್ಣ ಸ್ಥಾವರಗಳಲ್ಲಿ ಪ್ಯಾಲೆಟ್‌ಗಳಾಗಿ ಬಳಸಲಾಗುತ್ತಿದೆ, ಇದು ರೈತರಿಗೆ ಲಾಭದಾಯಕವಾಗಿದೆ ಎಂದು ಹೇಳಿದರು.

ಪ್ಯಾಲೆಟ್ ಸ್ಥಾವರವು ಕೂಳೆಯಿಂದ ದಿನಕ್ಕೆ 240 ಟನ್ ಪೆಲೆಟ್‌ಗಳನ್ನು ಉತ್ಪಾದಿಸುತ್ತದೆ ಮತ್ತು ಸ್ವಚ್ಛ ಪರಿಸರಕ್ಕೆ ಸಹಾಯ ಮಾಡುತ್ತದೆ. ಭಾರತದ ಇ20 ಮಿಷನ್ ಮತ್ತು ನೆಟ್ ಝೀರೋ 2070 ಗುರಿಗಳನ್ನು ಬೆಂಬಲಿಸಲು ಬೆಳೆ ಅವಶೇಷಗಳನ್ನು ಎಥೆನಾಲ್, ಬಯೋಮಾಸ್ ಪೆಲೆಟ್‌ಗಳು ಮತ್ತು ಗ್ರಾಮೀಣ ಉದ್ಯೋಗಗಳಾಗಿ ಪರಿವರ್ತಿಸುವ ಗುರಿಯನ್ನು ಈ ಸ್ಥಾವರ ಹೊಂದಿದೆ.

***************

ಟೋಕಿಯೊದಲ್ಲಿ ಇಂದು ನಡೆದ 25ನೇ ಬೇಸಿಗೆ ಡೆಫ್ಲಿಂಪಿಕ್ಸ್ ಶೂಟಿಂಗ್‌ನಲ್ಲಿ ಮಹಿಳೆಯರ 25 ಮೀಟರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಪ್ರಾಂಜಲಿ ಪ್ರಶಾಂತ್ ಧುಮಾಲ್ ಚಿನ್ನದ ಪದಕ ಗೆದ್ದರು,

ಇದು ಬಹು–ಕ್ರೀಡಾ ಸ್ಪರ್ಧೆಯಲ್ಲಿ ಅವರ ಮೂರನೇ ಪದಕವಾಗಿದೆ. ಪ್ರಾಂಜಲಿ 600 ರಲ್ಲಿ 573 ಅಂಕಗಳೊಂದಿಗೆ ಹೊಸ ವಿಶ್ವ ಮತ್ತು ಡೆಫ್ಲಿಂಪಿಕ್ ಅರ್ಹತಾ ದಾಖಲೆಯನ್ನು ಸ್ಥಾಪಿಸಿದ ನಂತರ ಫೈನಲ್‌ಗೆ ಮುನ್ನಡೆದರು.

ಉಕ್ರೇನ್‌ನ ಮೊಸಿನಾ ಹಲಿನಾ ಈ ಸ್ಪರ್ಧೆಯಲ್ಲಿ ಬೆಳ್ಳಿ ಗೆದ್ದರೆ, ದಕ್ಷಿಣ ಕೊರಿಯಾದ ಜಿಯೋನ್ ಜಿವೊನ್ ಕಂಚಿನ ಪದಕ ಗೆದ್ದರು.

ಇದರೊಂದಿಗೆ, ನಡೆಯುತ್ತಿರುವ ಡೆಫ್ಲಿಂಪಿಕ್ಸ್‌ನಲ್ಲಿ ಭಾರತೀಯ ಶೂಟರ್‌ಗಳು ಇದುವರೆಗೆ 16 ಪದಕಗಳನ್ನು ಗೆದ್ದಿದ್ದಾರೆ, ಇದರಲ್ಲಿ ಏಳು ಚಿನ್ನ, ಆರು ಬೆಳ್ಳಿ ಮತ್ತು ಮೂರು ಕಂಚು ಸೇರಿವೆ. ಒಟ್ಟಾರೆಯಾಗಿ, ಭಾರತ ಇದುವರೆಗೆ 26 ಚಿನ್ನ, 9 ಬೆಳ್ಳಿ ಮತ್ತು 17 ಕಂಚು ಗೆದ್ದಿದೆ.

***************

ಸರ್ಕಾರದ ಹೊಸ ಕಾರ್ಮಿಕ ಸುಧಾರಣೆಗಳು ಭವಿಷ್ಯಕ್ಕೆ ಸಿದ್ಧವಾದ ಆರ್ಥಿಕತೆಗೆ ಬದ್ಧತೆ, ಅನುಸರಣೆಯನ್ನು ಸರಳಗೊಳಿಸುವುದು, ಮಹಿಳಾ ಕಾರ್ಮಿಕರನ್ನು ಸಬಲೀಕರಣಗೊಳಿಸುವುದು ಮತ್ತು ಜಾಗತಿಕ ಮೌಲ್ಯ ಸರಪಳಿಯಲ್ಲಿ ದೇಶದ ಸ್ಥಾನವನ್ನು ಬಲಪಡಿಸುವುದನ್ನು ಪ್ರತಿಬಿಂಬಿಸುತ್ತವೆ ಎಂದು ಪ್ರಧಾನಿ ನರೇಂದ್ರ ಮೋದಿ ಇಂದು ಹೇಳಿದ್ದಾರೆ.

ಕೇಂದ್ರ ಸಚಿವ ಮನ್ಸುಖ್ ಮಾಂಡವಿಯಾ ಅವರ ಲೇಖನವನ್ನು ಹಂಚಿಕೊಂಡ ಮೋದಿ, ವಿಶ್ವಾಸಾರ್ಹ ಜಾಗತಿಕ ಪಾಲುದಾರನಾಗಿ ಭಾರತದ ಏರಿಕೆಯನ್ನು ಜಗತ್ತು ಒಪ್ಪಿಕೊಳ್ಳುತ್ತದೆ ಎಂದು ಪ್ರತಿಪಾದಿಸಿದರು.

***************

ದ್ವಿಪಕ್ಷೀಯ ವ್ಯಾಪಾರ ಮತ್ತು ಹೂಡಿಕೆಯನ್ನು ಹೆಚ್ಚಿಸಲು ಭಾರತ ಮತ್ತು ಕೆನಡಾ ಮುಕ್ತ ವ್ಯಾಪಾರ ಒಪ್ಪಂದ ಮಾತುಕತೆಗಳನ್ನು ತ್ವರಿತಗೊಳಿಸಲಿವೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಹೇಳಿದ್ದಾರೆ.

ಇಂದು ನವದೆಹಲಿಯಲ್ಲಿ ಇಂಡೋ-ಕೆನಡಾ ವ್ಯಾಪಾರ ಮಂಡಳಿಯನ್ನುದ್ದೇಶಿಸಿ ಮಾತನಾಡಿದ ಅವರು, ನಿರ್ಣಾಯಕ ಖನಿಜಗಳು, ಶುದ್ಧ ಇಂಧನ, ಪರಮಾಣು ಶಕ್ತಿ ಮತ್ತು ಪೂರೈಕೆ-ಸರಪಳಿ ವೈವಿಧ್ಯೀಕರಣದಲ್ಲಿ ಕೆನಡಾದೊಂದಿಗೆ ಸಹಯೋಗಕ್ಕೆ ಭಾರತವು ಗಣನೀಯ ಅವಕಾಶವನ್ನು ಎದುರು ನೋಡುತ್ತಿದೆ ಎಂದು ಹೇಳಿದರು.

ಜಿ-20 ಶೃಂಗಸಭೆಯ ಸಂದರ್ಭದಲ್ಲಿ ಎರಡೂ ದೇಶಗಳ ಪ್ರಧಾನ ಮಂತ್ರಿಗಳ ನಡುವಿನ ಇತ್ತೀಚಿನ ಸಭೆಯನ್ನು ಉಲ್ಲೇಖಿಸಿದ ಗೋಯಲ್, 2030ರ ವೇಳೆಗೆ ಹೆಚ್ಚಿನ ಮಹತ್ವಾಕಾಂಕ್ಷೆಯ ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದ ಮತ್ತು ದ್ವಿಪಕ್ಷೀಯ ವ್ಯಾಪಾರಕ್ಕಾಗಿ ಮಾತುಕತೆಗಳನ್ನು ಪ್ರಾರಂಭಿಸಲು ಉಭಯ ನಾಯಕರು ಒಪ್ಪಿಕೊಂಡಿದ್ದಾರೆ ಎಂದು ಹೇಳಿದರು.

***************

ಗೀತೆಯ ಸಂದೇಶವು ಭಾರತದ ಗಡಿಗಳಿಗೆ ಸೀಮಿತವಾಗಿಲ್ಲ; ಅದು ಸಾರ್ವತ್ರಿಕ ಗ್ರಂಥವಾಗಿದೆ. ಗೀತೆ ನಮ್ಮೆಲ್ಲರ ಜೀವನದ ಮೇಲೆ ಪ್ರಭಾವ ಬೀರಿದೆ. ಹರಿಯಾಣ ಸರ್ಕಾರವು ಗೀತೆಯ ಪ್ರಚಾರವನ್ನು ಸಂಪೂರ್ಣವಾಗಿ ಬೆಂಬಲಿಸುತ್ತಿದೆ. ಇಂತಹ ಕಾರ್ಯಕ್ರಮಗಳು ನಮ್ಮ ಯುವ ಪೀಳಿಗೆಯ ಪ್ರಜ್ಞೆಯನ್ನು ಜಾಗೃತಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದರು.

ಅವರು, ಕುರುಕ್ಷೇತ್ರ ವಿಶ್ವವಿದ್ಯಾಲಯ, ವಿದೇಶಾಂಗ ವ್ಯವಹಾರಗಳ ಸಚಿವಾಲಯ ಮತ್ತು ಕುರುಕ್ಷೇತ್ರ ಅಭಿವೃದ್ಧಿ ಮಂಡಳಿಯ ಜಂಟಿ ಆಶ್ರಯದಲ್ಲಿ ಇಂದು ಭಗವದ್ಗೀತೆಯಲ್ಲಿ ಹೇಳಿರುವ 'ಸ್ವಧರ್ಮ' -ಕರ್ತವ್ಯದ ಮೇಲಿನ ಭಕ್ತಿ, ಶಾಂತಿ, ಸದ್ಭಾವನೆ ಮತ್ತು ಸ್ವದೇಶಿಯ ಮನೋಭಾವ ಎಂಬ ವಿಷಯದ ಮೇಲೆ ಆಯೋಜಿಸಲಾದ ಅಂತಾರಾಷ್ಟ್ರೀಯ ಗೀತಾ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

***************

ರೈತರ ಅನುಕೂಲಕ್ಕಾಗಿ ಸಮಗ್ರ ಕೃಷಿಯ ಮೇಲೆ ಸರ್ಕಾರ ಗಮನಹರಿಸುತ್ತಿದೆ. ರೈತರಿಗೆ ಸಮಗ್ರ ಕೃಷಿಯನ್ನು ಅಳವಡಿಸಿಕೊಳ್ಳುವಂತೆ ಉತ್ತೇಜಿಸಬೇಕು, ಮುಂದಿನ ಐದು ವರ್ಷಗಳ ಕಾಲ ಸಮಗ್ರ ಕೃಷಿಗೆ ಸಂಬಂಧಿಸಿದ ಯೋಜನೆಯನ್ನು ರೂಪಿಸುವಂತೆ ಕೃಷಿ ವಿಜ್ಞಾನಿಗಳನ್ನು ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಒತ್ತಾಯಿಸಿದರು.

ನವದೆಹಲಿಯಲ್ಲಿ ಇಂದು ನಡೆದ ಆರನೇ ಅಂತಾರಾಷ್ಟ್ರೀಯ ಕೃಷಿ ವಿಜ್ಞಾನ ಕಾಂಗ್ರೆಸ್ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

***************

ರಕ್ಷಣಾ ಖಾತೆ ರಾಜ್ಯ ಸಚಿವ ಸಂಜಯ್ ಸೇಠ್ ಇಂದು ನವದೆಹಲಿಯಲ್ಲಿ ಒಮಾನ್ ರಕ್ಷಣಾ ಸಚಿವಾಲಯದ ಪ್ರಧಾನ ಕಾರ್ಯದರ್ಶಿ ಡಾ. ಮೊಹಮ್ಮದ್ ಬಿನ್ ನಸೀರ್ ಬಿನ್ ಅಲಿ ಅಲ್ ಜಾಬಿ ಅವರನ್ನು 13 ನೇ ಜಂಟಿ ಮಿಲಿಟರಿ ಸಹಕಾರ ಸಮಿತಿ ಸಭೆಯ ಸಂದರ್ಭದಲ್ಲಿ ಭೇಟಿಯಾದರು.

ಸಭೆಯಲ್ಲಿ ಭಾರತ-ಓಮನ್ ರಕ್ಷಣಾ ಸಹಕಾರದ ಪ್ರಗತಿಯನ್ನು ಎರಡೂ ಕಡೆಯವರು ಪರಿಶೀಲಿಸಿದ್ದಾರೆ.

***************

ಗುವಾಹಟಿಯಲ್ಲಿ ನಡೆಯುತ್ತಿರುವ ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಿನ ದ್ವಿತೀಯ ಟೆಸ್ಟ್ ಕ್ರಿಕೆಟ್ ಪಂದ್ಯದ ಮೂರನೇ ದಿನದಾಟ ಮುಕ್ತಾಯವಾಗಿದೆ.

ದಕ್ಷಿಣ ಆಫ್ರಿಕಾ ಎರಡನೇ ಇನ್ನಿಂಗ್ಸ್‌ನಲ್ಲಿ ಯಾವುದೇ ವಿಕೆಟ್ ನಷ್ಟವಿಲ್ಲದೆ 26 ರನ್ ಗಳಿಸಿದ್ದು, ರಿಯಾನ್ ರಿಕಲ್ ಟನ್ 13 ಹಾಗೂ ಹೇಜನ್ ಮಾರ್ಕ್ರಮ್ 12 ರನ್ ಗಳಿಸಿ, ಕ್ರೀಸ್‌ನಲ್ಲಿದ್ದಾರೆ. ದಕ್ಷಿಣ ಆಫ್ರಿಕಾ ಒಟ್ಟಾರೆಯಾಗಿ 314 ರನ್‌ಗಳ ಮುನ್ನಡೆಯಲ್ಲಿದೆ.

ಇದಕ್ಕೂ ಮುನ್ನ ಮೊದಲ ಇನ್ನಿಂಗ್ಸ್‌ನಲ್ಲಿ ದಕ್ಷಿಣ ಆಫ್ರಿಕಾ 489 ರನ್‌ಗಳಿಗೆ ಆಲ್‌ಔಟ್ ಆಗಿತ್ತು.

ಭಾರತ ಮೊದಲೊ ಇನ್ನಿಂಗ್ಸ್‌ನಲ್ಲಿ 201 ರನ್‌ಗಳಿಗೆ ತನ್ನೆಲ್ಲಾ ವಿಕೆಟ್ ಕಳೆದುಕೊಂಡು ಹಿನ್ನಡೆ ಅನುಭವಿಸಿದೆ.

***************

ವಿಶ್ವ ಬಾಕ್ಸಿಂಗ್ ಕಪ್ 2025ರ ಫೈನಲ್ಸ್‌ನಲ್ಲಿ ಭಾರತೀಯ ಬಾಕ್ಸರ್‌ಗಳ ಪ್ರದರ್ಶನಕ್ಕಾಗಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಇಂದು ಅಭಿನಂದಿಸಿದ್ದಾರೆ. 9 ಚಿನ್ನ, 6 ಬೆಳ್ಳಿ ಮತ್ತು 5 ಕಂಚಿನ ಪದಕಗಳು ಸೇರಿದಂತೆ 20 ಪದಕಗಳನ್ನು ಗೆದ್ದ ತಂಡವನ್ನು ಅವರು ಸಾಮಾಜಿಕ ಜಾಲತಾಣದಲ್ಲಿ ಶ್ಲಾಘಿಸಿದ್ದಾರೆ.

*******ಮುಕ್ತಾಯ*******